

# ಪೃಥ್ವಿಯ ಅಂಬರದ ಕನಸು

ಪೃಥ್ವಿ ಮತ್ತು ಅಂಬರ ಎರಡನ್ನೂ ತಮ್ಮ ಹೆಸರಲ್ಲಿಯೇ ಇಟ್ಟುಕೊಂಡಿರುವ ಮಹತ್ವಾಕಾಂಕ್ಷಿ ನಟ ಪೃಥ್ವಿ ಅಂಬರ್. ತಮ್ಮ ಯಶಸ್ಸಿನ ನೆರಳಲ್ಲಿಯೇ ನಿಂತು ಕೊಳೆಯಲಾರೆ ಎಂದು ದಿಟ್ಟವಾಗಿ ಹೇಳುವ ಅವರಲ್ಲಿ ಹೊಸತನದ ಬಿಸಿಲಿಗೆ ಮೈಕೊಟ್ಟು ಬೆಳೆಯುವ ಹಂಬಲವಿದೆ.

■ ಪದ್ಮನಾಭ ಭಟ್

‘ಒಂದು ಒಳ್ಳೆಯ ಸಿನಿಮಾ ಕೊಡುವ ಖುಷಿಯನ್ನು ನೂರು ಕೆಟ್ಟ ಸಿನಿಮಾ ಕೊಡುವುದು ಸಾಧ್ಯ ಇಲ್ಲ. ನಾವು ಪ್ರಾಮಾಣಿಕವಾಗಿ ಸಿನಿಮಾ ಮಾಡಿದರೆ ಖಂಡಿತ ಅದರಿಂದ ಒಳ್ಳೆಯದಾಗುತ್ತದೆ. ಒಳ್ಳೆಯ ಸಿನಿಮಾ ಮಾಡುವುದು ತುಂಬ ಇಂಪಾರ್ಟೆಂಟ್.’

ಇಷ್ಟನ್ನು ಹೇಳುವಾಗ ಪೃಥ್ವಿ ಅಂಬರ್ ಅವರ ಧ್ವನಿಯಲ್ಲಿ ಧನ್ಯತಾಭಾವ ತುಳುಕುತ್ತಿತ್ತು. ತಮ್ಮ ಮುಂದೆ ಜಮೆಯಾಗುತ್ತಿರುವ ಅವಕಾಶಗಳನ್ನು ನೋಡುತ್ತಲೇ ಅವರು, ಅದಕ್ಕಾಗಿ ತಾವು ಸಾಗಿಬಂದ ದಾರಿಯನ್ನೂ ನೆನಪಿಸಿಕೊಂಡರು.

ಹಾ, ಪೃಥ್ವಿ ಅಂದರೆ ಎಷ್ಟೋ ಜನರಿಗೆ ಗೊತ್ತಾಗಲಿಕ್ಕಿಲ್ಲ. ಬದಲಿಗೆ ‘ದಿಯಾ’ದ ಆದಿ ಎಂದರೆ ಝುಗ್ಗನೆ ನೆನಪಿನ ದೀಪ ಹೊತ್ತಿಕೊಳ್ಳುತ್ತದೆ. ಕಣ್ಣುಗಳಲ್ಲಿ ಮೆಚ್ಚುಗೆಯ ಬೆಳಕೂ ಸೂಸುತ್ತದೆ. ಇಷ್ಟೊಂದು ಹೆಸರು ತಂದುಕೊಟ್ಟ ‘ದಿಯಾ’ ಸಿನಿಮಾ, ಪೃಥ್ವಿ ಅವರ ಕನ್ನಡ ಚಿತ್ರರಂಗದ ಮೊದಲ ಕನಸು. ಈ ಕನಸು ತೆರೆಯ ಮೇಲೆ ನನಸಾಗಲು ಅವರು ಕಾದಿದ್ದು ಒಂದೆರಡು ವರ್ಷಗಳಲ್ಲ, ಬರೋಬ್ಬರಿ ಆರು ವರ್ಷ! ಹೌದು. ಪೃಥ್ವಿ ‘ದಿಯಾ’ ಸಿನಿಮಾಗೆ ಸಹಿ ಮಾಡಿದ್ದು 2014ರಲ್ಲಿಯೇ. ಆ ಚಿತ್ರ ಪೂರ್ಣಗೊಂಡು ತೆರೆಯ ಮೇಲೆ ಬಂದಿದ್ದು ಮಾತ್ರ 2020ರಲ್ಲಿ.

ಒಂದು ಸಿನಿಮಾಗೋಸ್ಕರ ಅಷ್ಟೊಂದು ವರ್ಷಗಳು ಕಾಯುವುದು ಅಸಹನೀಯ ಅಲ್ಲವೇ ಎಂದು ಕೇಳಿದರೆ, ‘ನಿರ್ದೇಶಕರ ತಾಳ್ಮೆಯ ಮುಂದೆ ನನ್ನದು ಯಾವ ಲೆಕ್ಕವೂ ಅಲ್ಲ’ ಎಂದು ನಗುತ್ತಾರೆ ಅವರು. ‘ದಿಯಾ ನಿರ್ದೇಶಕರು ಹಿಂದೆ ಒಂದು ಹಿಟ್ ಸಿನಿಮಾ